ಆ ದಿನ ಇದೇ ರೀತಿ ಕಳೆಯಿತು. ಶ್ರೀಮಾತೆ ಇವೆಲ್ಲವನ್ನೂ ಗಮನಿಸಿದ್ದರು. ಮರುದಿನ ನಾನು ಇನ್ನೊಬ್ಬ ಮಹಿಳೆಗೆ ಹೇಳಿ ಬಟ್ಟೆಗಳನ್ನು ಒಗೆಸಲೆಂದು ಸ್ಕೂಲಿನ ವಸತಿಗೃಹಕ್ಕೆ ಹೋದೆ. ನಾನು ಹೋದ ಮೇಲೆ ಶ್ರೀಮಾತೆ ಆ ಮಹಿಳೆಯನ್ನು ಕೇಳಿದರು. "ಸರಳಾ ಎಲ್ಲಿ ಹೋದಳು?" ಎಂದು. ನಾನು ಸ್ಕೂಲಿಗೆ ಹೋಗಿದ್ದೇನೆಂದು ಕೇಳಿ, "ನನ್ನ ಮೇಲೆ ಕೋಪ ಮಾಡಿಕೊಂಡು ಹೊರಟುಹೋದಳೆ?" ಎಂದು ಕೇಳಿದರು. ನಾನು ಹಿಂತಿರುಗಿದ ಮೇಲೆ ಆ ಮಹಿಳೆ ಎಲ್ಲಾ ವಿಚಾರ ವನ್ನೂ ತಿಳಿಸಿದಳು. ಶ್ರೀಮಾತೆಯ ಕೊಠಡಿಗೆ ಹೋದ ಕೂಡಲೇ ಶ್ರೀಮಾತೆ ನನ್ನನ್ನು ಹತ್ತಿರ ಕರೆದು ಕೇಳಿದರು, "ನನ್ನ ಮೇಲೆ ಸಿಟ್ಟು ಬಂದಿದೆಯೇನಮ್ಮಾ ?"

ನಾನು ಇಲ್ಲವೆಂದಾಗ ಮತ್ತೆ ಹೇಳಿದರು, "ಹಾಗಿದ್ದರೆ ನನಗೆ ಹಾಲು ಕುಡಿಸುತ್ತಿಲ್ಲವೇಕೆ? ಕಂಕುಳಲ್ಲಿ ಕಡ್ಡಿ ಇಡುತ್ತಿಲ್ಲ ವೇಕೆ? ರೋಗದಲ್ಲಿ ನರಳಿ ನರಳಿ ನನ್ನ ಬುದ್ಧಿ ಹೀಗಾಗಿ ಹೋಗಿದೆ. ಏನು ಮಾತನಾಡುತ್ತೇನೋ ನನಗೇ ಗೊತ್ತಾಗು ವುದಿಲ್ಲ." ಹೀಗೆ ಹೇಳಿದವರು ನನ್ನನ್ನು ಹತ್ತಿರ ಕರೆದು ನನ್ನ ತಲೆಯನ್ನು ನೇವರಿಸಲಾರಂಭಿಸಿದರು. ನಾನು ಆಗ ಜೋರಾಗಿ ಅಳತೊಡಗಿದೆ. ಶ್ರೀಮಾತೆ ಇನ್ನು ಹೆಚ್ಚು ದಿನ ನಮ್ಮ ನಡುವೆ ಇರಲಾರರು ಎಂಬ ವೇದನೆ ನಮ್ಮೆಲ್ಲರ ಮನ ದಲ್ಲಿ ಸದಾ ಜಾಗೃತವಾಗಿರುತ್ತಿತ್ತು.

ಶ್ರೀಮಾತೆಯ ಶರೀರತ್ಯಾಗದ ಹಿಂದಿನ ದಿನ ಅವರಿಗೆ ಉಸಿರಾಟದ ತೊಂದರೆ ಆರಂಭವಾಯಿತು. ಅವರು ಉಸಿರು ಎಳೆದುಕೊಂಡಾಗ ಆಗುತ್ತಿದ್ದ ಶಬ್ದ ಇಡೀ ಮನೆಗೆ ಕೇಳಿಸುತ್ತಿತ್ತು. ಕಣ್ಣುಗಳು ಹೊರಗೆ ಉಬ್ಬಿದ್ದಂತೆ ಕಂಡುಬರುತ್ತಿದ್ದವು. ಭಕ್ತರು, ಸನ್ಯಾಸಿಗಳಿಂದ ಮನೆ ತುಂಬಿ ಹೋಯಿತು. ಇಡೀ ರಾತ್ರಿ ಸುಧೀರಾ ಅಕ್ಕನೊಡನೆ ನಾನು ಶ್ರೀಮಾತೆಯವರ ಪಾದದ ಬಳಿ ಕುಳಿತಿರುತ್ತಿದ್ದೆ. ಅನಂತರ ಉಸಿರಿನ ಶಬ್ದ ನಿಧಾನವಾಗಿ ಕಡಮೆಯಾಯಿತು. ರಾತ್ರಿ ಒಂದು ಗಂಟೆಗೆ ಎಲ್ಲಾ ಶಾಂತವಾಯಿತು. ಅಂದು ೧೯೨೦, ಜುಲೈ ೨೧.

ಶ್ರೀಮಾತೆಯ ಶರೀರವನ್ನು ಬೇಲೂರುಮಠಕ್ಕೆ ಕರೆದೊಯ್ಯಲಾಯಿತು. ಸುಧೀರಾ ಅಕ್ಕ ಹಾಗೂ ನಾನು ಅವರ ಶರೀರಕ್ಕೆ ಗಂಗಾಸ್ನಾನ ಮಾಡಿಸಿದೆವು. ಶ್ರೀಗಂಧದ ಚಿತೆಯಲ್ಲಿ ಶರೀರವನ್ನು ಇರಿಸಿ, ಶರತ್ ಮಹಾರಾಜ್ ಹಾಗೂ ಉಳಿದೆಲ್ಲ ಸಾಧುಗಳು ಬಿಲ್ವಪತ್ರೆ, ಧೂಪ ಇತ್ಯಾದಿಗಳನ್ನು ಹಿಡಿದುಕೊಂಡು ಪ್ರದಕ್ಷಿಣೆ ಮಾಡಿ ಆಹುತಿ ಕೊಟ್ಟರು. ಕೊನೆಯಲ್ಲಿ ನಾವೂ ಪ್ರದಕ್ಷಿಣೆ ಮಾಡಿ ಮೂರು ಬಾರಿ ಆಹುತಿ ಕೊಟ್ಟೆವು.

ಅಲ್ಲಿಂದ ಹಿಂದಿರುಗಿದ ಮೇಲೆ ನಾನು ಸುಧೀರಾ ಅಕ್ಕನೊಡನೆ ನಿವೇದಿತಾ ಸ್ಕೂಲಿನ ವಸತಿಗೃಹಕ್ಕೆ ಹೋದೆ. ಸುಧೀರಾ ಅಕ್ಕ ತುಂಬಾ ದುಃಖದಲ್ಲಿದ್ದರು. ಸ್ಕೂಲಿಗೆ ರಜೆ ಬಂದೊಡನೆ ನಮ್ಮಲ್ಲಿ ಕೆಲವರನ್ನು ಕರೆದುಕೊಂಡು ತೀರ್ಥ ಯಾತ್ರೆಗೆ ಹೊರಟರು. ಹರಿದ್ವಾರ, ಹೃಷಿಕೇಶ, ಬೃಂದಾವನ, ಆಗ್ರಾ, ಅಲಹಾಬಾದ್ – ಎಲ್ಲಾ ಮುಗಿಸಿ ನಾವು ಕಾಶಿಗೆ ಹಿಂತಿರುಗಲು ಸಂಜೆ ನಾಲ್ಕು ಗಂಟೆಗೆ ರೈಲಿನ ಮೂರನೆಯ ದರ್ಜೆಯ ಬೋಗಿಯನ್ನು ಹತ್ತಿದೆವು. ರಾತ್ರಿ ಎಂಟು ಗಂಟೆಗೆ ಸುಧೀರಾ ಅಕ್ಕ ಎದ್ದು ಶೌಚಾಲಯಕ್ಕೆ ಹೋದರು. ರೈಲು ವಿಪರೀತ ಕುಲುಕಾಡುತ್ತಿತ್ತು. ಸುಧೀರಾ ಅಕ್ಕ ಹಿಂತಿರುಗುವಾಗ ಬಾಗಿಲಿನವರೆಗೆ ಬಂದಿದ್ದನ್ನು ನಾನು ನೋಡಿದೆ. ಆಗೆಲ್ಲಾ ರೈಲಿನಲ್ಲಿ ಬಾಗಿಲು ಹೊರಗೆ ತೆಗೆದು ಕೊಳ್ಳುವಂತೆ ಇರುತ್ತಿತ್ತು. ಇದ್ದಕ್ಕಿದ್ದಂತೆ ಸುಧೀರಾ ಅಕ್ಕ ಕಾಣದಾದರು. ನನ್ನ ಜೊತೆಯಿದ್ದ ಸ್ಕೂಲಿನ ಶಿಕ್ಷಕಿ ಚಪಲಾ ಜೋರಾಗಿ ಕಿರುಚಿಕೊಂಡಳು, "ಸುಧೀರಾ ಅಕ್ಕ ಬಿದ್ದುಬಿಟ್ಟರು, ಬಿದ್ದುಬಿಟ್ಟರು." ರೈಲನ್ನು ನಿಲ್ಲಿಸಲು ಇರುವ ಚೈನ್ ತುಂಬಾ ಬಿಗಿಯಾಗಿತ್ತು. ಇರುವ ಶಕ್ತಿಯೆಲ್ಲಾ ಬಿಟ್ಟು ನಾವು ಅದಕ್ಕೆ ನೇತುಬಿದ್ದೆವು. ರೈಲು ಅತ್ಯಂತ ವೇಗವಾಗಿ ಓಡು ತ್ತಿತ್ತು. ಸ್ವಲ್ಪ ದೂರ ಇದೇ ರೀತಿ ಹೋಗಿ, ನಿಧಾನವಾಗಿ ಅದರ ವೇಗ ಕಡಿಮೆಯಾಗುತ್ತಾ ಬಂದು, ಕಡೆಗೂ ರೈಲು ನಿಂತಿತು. ನಾನು ಹಾಗೂ ಚಪಲಾ ಬಾಗಿಲಿನಿಂದ ಹೊರಕ್ಕೆ ಹಾರಿ ವಿರುದ್ಧ ದಿಕ್ಕಿನಲ್ಲಿ ಓಡತೊಡಗಿದೆವು. ಬಹುದೂರ ಓಡಿದ ಮೇಲೆ ರೈಲ್ವೆ ಲೈನಿನ ಪಕ್ಕದಲ್ಲಿ ಸುಧೀರಾ ಅಕ್ಕ ನಿಶ್ಚಲರಾಗಿ ಬಿದ್ದಿರುವುದು ಕಂಡಿತು. ಅವರನ್ನು ಕಾಶಿಯ ಸೇವಾಶ್ರಮಕ್ಕೆ ಕರೆದುಕೊಂಡು ಹೋದೆವು. ಶರತ್ ಮಹಾರಾಜ್‌ರಿಗೆ ತಂತಿ ಕಳುಹಿಸಲಾಯಿತು. ೧೯೨೦ ರ ನವೆಂಬರ್ ತಿಂಗಳ ಒಂದು ದಿನ ಮಧ್ಯಾಹ್ನ ೩ ಗಂಟೆಗೆ ಸುಧೀರಾ ಅಕ್ಕ ಕೊನೆಯುಸಿರೆಳೆದರು. ನಾವೆಲ್ಲರೂ ಏನೂ ತೋಚದೆ ಮರಗಟ್ಟಿಹೋಗಿದ್ದೆವು. ಆಶ್ರಮದ ಬ್ರಹ್ಮಚಾರಿಗಳು ಸುಧೀರಾ ಅಕ್ಕನ ಶರೀರವನ್ನು ಮಣಿಕರ್ಣಿಕಾ ಘಾಟಿಗೆ ತೆಗೆದು ಕೊಂಡು ಹೋದರು.

(ಮುಂದುವರಿಯುವುದು)

**ತಿದ್ದುಪಡಿ**

**'ವಿವೇಕಪ್ರಭ' ದ ಸೆಪ್ಟೆಂಬರ್ 2011ರ ಸಂಚಿಕೆಯ ಪುಟ 20ರಲ್ಲಿ ಮೊದಲನೆಯ ಪ್ಯಾರಾದಲ್ಲಿ ಬರುವ 'ಅಜಾತಪುತ್ರಂ' ಎನ್ನುವುದನ್ನು 'ಅಜಾಪುತ್ರಂ' ಎಂದು ಓದಿಕೊಳ್ಳಬೇಕಾಗಿ ವಿನಂತಿ. ಮುದ್ರಣದೋಷಕ್ಕಾಗಿ ಕ್ಷಮೆಯಾಚಿಸುತ್ತೇವೆ. – ಸಂ.**

# ಪುಷ್ಪ ೮–ಸ್ವಾಮಿ ರಾಮಕೃಷ್ಣಾನಂದ



ಶ್ರೀರಾಮಕೃಷ್ಣ ಶಿಷ್ಯೋದ್ಯಾನ

ಡಾ. ಕೆ. ಅನಂತರಾಮು

**ಸ್ವಾ**ಮಿ ರಾಮಕೃಷ್ಣಾನಂದರು ತಮ್ಮ ಸದ್ಗುರುವಿನ ನಾಮವನ್ನೇ ತಮ್ಮ ಆಶ್ರಮನಾಮವನ್ನಾಗಿ ಪಡೆದು ಕೃತಾರ್ಥರಾದ ಪುಣ್ಯಜೀವಿಗಳು. ಪರಮ ಹಂಸರ ಸೇವೆಯನ್ನು ಅವರಷ್ಟು ಗಾಢವಾಗಿ ಮಾಡಿದ ಮತ್ತೊಬ್ಬರಿಲ್ಲ. ಪರಮ ಹಂಸರ ಕರಕಮಲಸಂಜಾತರಾಗಿ, ಅವರ ಮಾನಸಪುತ್ರರಾಗಿ, ಅವರ ಹೃದಯವನ್ನರಿತು, ಅವರ ಹೃದಯಕ್ಕೆ ಹತ್ತಿರವಾಗಿ, ಅವರ ಹೃದಯಕಮಲ ದಲ್ಲಿ ಒಂದಾದ ಪುರುಷೋತ್ತಮರೆಂದರೆ ರಾಮಕೃಷ್ಣಾನಂದರು ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ತನು ನಿನ್ನದು, ಮನ ನಿನ್ನದು ಎನ್ನುತ್ತಲೆ ಸದ್ಗುರುನಾಥನ ಅಡಿದಾವರೆಗಳಲ್ಲಿ ತಮ್ಮ ಸರ್ವಸ್ವವನ್ನೂ ಅವರು ಸಮರ್ಪಿಸಿಕೊಂಡರು.

**ಸುಸಂಸ್ಕೃತ ಜೀವನ:** ಪಶ್ಚಿಮಬಂಗಾಳದ ಹೂಗ್ಲಿಜಿಲ್ಲೆಯ ಇಚ್ಛಾಪುರವೆಂಬ ಗ್ರಾಮದಲ್ಲಿ ರಾಮಕೃಷ್ಣಾನಂದರು ೧೩–೭–೧೮೬೩ರಲ್ಲಿ ಅವತರಿಸಿದರು. ಅವರ ತಂದೆತಾಯಿಗಳಾದ ಈಶ್ವರಚಂದ್ರಚಕ್ರವರ್ತಿ ಮತ್ತು ಭುವನಸುಂದರಿ ದೇವಿಯರು ಸುಸಂಸ್ಕೃತ ಬ್ರಾಹ್ಮಣ ಪರಂಪರೆಗೆ ಸೇರಿದವರಾಗಿದ್ದರು. ರಾಮಕೃಷ್ಣಾನಂದರು ಮನೆಯ ಹಿರಿಯ ಮಗನಾಗಿದ್ದರು, ಶಶಿಭೂಷಣ ಚಕ್ರವರ್ತಿ ಎಂಬುದು ಅವರ ಹೆಸರಾಗಿತ್ತು. ಈಶ್ವರಚಂದ್ರರು ತಂತ್ರಶಾಸ್ತ್ರ ಕೋವಿದರಾಗಿ ಆದಿಶಕ್ತಿಯ ಉಪಾಸಕರಾಗಿದ್ದರು. ಶ್ಮಶಾನಗಳಲ್ಲಿ, ನದಿಯ ತೀರಗಳಲ್ಲಿ, ಬಿಲ್ವ ಆಲ ಅಶ್ವತ್ಥ ಮುಂತಾದ ವೃಕ್ಷತಲಗಳಲ್ಲಿ ಅವರು ತಮ್ಮ ತಾಂತ್ರಿಕ ಸಾಧನೆಗಳನ್ನು ನಡೆಸುತ್ತಿದ್ದರು, ಅವರ ನಿಷ್ಠೆಗೊಲಿದ ಜಗನ್ಮಾತೆಯು ಪುಟ್ಟ ಬಾಲಕಿಯಾಗಿ ಅವರಿಗೆ ದರ್ಶನಕೊಟ್ಟಿದ್ದಳು. ಭುವನಸುಂದರಿ ದೇವಿಯೂ ದೈವಭಕ್ತೆಯಾಗಿದ್ದು, ಅವರ ಮನೆಯಲ್ಲಿ ದುರ್ಗಾದೇವಿಯ ಆರಾಧನಾ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತಿದ್ದುವು. ರಾಮಕೃಷ್ಣಾನಂದರೂ ಆ ಪೂಜಾಕಾರ್ಯಗಳ ಮಂತ್ರತಂತ್ರಗಳನ್ನೆಲ್ಲ ಕಲಿತಿದ್ದರು. ಕುಳಿತ ಜಾಗದಿಂದ ಮೇಲೇಳದೆ, ೨೪ಗಂಟೆಗಳ ಕಾಲ ಪೂಜೆಧ್ಯಾನಭಜನೆಗಳಲ್ಲಿ ತನ್ಮಯರಾಗುವ ಶಕ್ತಿಯನ್ನು ಅವರು ಆಗಲೇ ಸಂಪಾದಿಸಿಕೊಂಡಿದ್ದರು.

ರಾಮಕೃಷ್ಣಾನಂದರ ಬಾಲ್ಯದ ವಿದ್ಯಾಭ್ಯಾಸವು ಇಚ್ಛಾಪುರದಲ್ಲಿಯೇ ನಡೆಯಿತು. ಕಾಲೇಜುವಿದ್ಯೆಗೆಂದು ಕೋಲ್ಕೊತ್ತೆಗೆ ಬಂದು ಸೇರಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿ ವಿದ್ಯಾರ್ಥಿವೇತನಕ್ಕೆ ಪಾತ್ರರಾಗಿದ್ದರು. ಆಂಗ್ಲಸಾಹಿತ್ಯ, ಸಂಸ್ಕೃತಸಾಹಿತ್ಯ, ತತ್ವಶಾಸ್ತ್ರಗಳು ಅವರ ಅಧ್ಯಯನದ ವಿಶೇಷ ವಿಷಯಗಳಾಗಿದ್ದುವು. ಅಂದಿನ ದಿನಗಳಲ್ಲಿ ಕಾಲೇಜು ಯುವಕರಿಗೆ ಬ್ರಹ್ಮ ಸಮಾಜದ ಸದಸ್ಯರಾಗುವುದೊಂದು ಹೆಮ್ಮೆಯ, ಪ್ರತಿಷ್ಠೆಯ ವಿಷಯವಾಗಿತ್ತು. ರಾಮಕೃಷ್ಣಾನಂದರೂ ಅದರ ಸದಸ್ಯರಾಗಿ ಕೇಶವಚಂದ್ರಸೇನರ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದರು.

ಒಮ್ಮೆ ಕೇಶವಚಂದ್ರಸೇನರು ಪರಮಹಂಸರನ್ನು ಕುರಿತು "ಅವರೊಬ್ಬ ವಿಭೂತಿಪುರುಷ, ದಿವ್ಯತ್ವವೇ ಮೈವೆತ್ತು ಧರೆಗಿಳಿದು ಬಂದವರು" ಎಂದು ಬಾಯ್ತುಂಬ ಕೊಂಡಾಡಿ, ಕೈತುಂಬ ಲೇಖನಗಳನ್ನು ಬರೆದರು. ಅದೇ ಪ್ರೇರಣೆಯಾಗಿ ರಾಮಕೃಷ್ಣಾ ನಂದರಿಗೆ ಪರಮಹಂಸರ ದರ್ಶನ ಮಾಡಬೇಕೆಂಬ ಮನಸ್ಸು ಹುಟ್ಟಿತು. ಗೃಹಸ್ಥರಿಗೆ ಉಪದೇಶ ಹೇಳಿ ಹೆಚ್ಚು ಪ್ರಯೋಜನವಿಲ್ಲ, ಸಾಧನೆಮಾಡುವ ಉತ್ಕಟೇಚ್ಛೆಯುಳ್ಳ ಯುವಕರು ಬರಬೇಕು ಎಂದು, ಪರಮಹಂಸರು ಅಂತಹವರ ದಾರಿಕಾಯುತ್ತಿದ್ದರು, ಆ ಕರುಳಿನ ಕರೆಗೆ ಓಗೊಟ್ಟು, ಆ ಸದ್ಗುರುವನ್ನು ಆಶ್ರಯಿಸಿದವರ ಗುಂಪಿಗೆ ರಾಮಕೃಷ್ಣಾನಂದರೂ ಸೇರಿಬಿಟ್ಟರು.

**ಪರಮಹಂಸರಿಗೆ ರೋಮಾಂಚನ:** ರಾಮಕೃಷ್ಣಾನಂದರು ಒಂದುದಿನ ಪರಮಹಂಸರನ್ನು ಸಮೀಪಿಸಿ "ನನ್ನ ಹೆಸರು ಶಶಿಭೂಷಣಚಕ್ರವರ್ತಿ" ಎಂದು ಹೇಳುತ್ತಿದ್ದಂತೆಯೆ ಅವರಿಗೆ ರೋಮಾಂಚನವಾಯಿತು. "ಆಹಾ, ಎಷ್ಟು ಸಾರ್ಥಕವಾದ

ಹೆಸರು, ಸಮುದ್ರಮಥನ ಕಾಲದಲ್ಲಿ ಉಕ್ಕಿಬಂದ ವಿಷವನ್ನು ಕುಡಿದು ಕಂಠದಲ್ಲಿ ನಿಲ್ಲಿಸಿ ಲೋಕರಕ್ಷಣೆಮಾಡಿ, ತರುವಾಯ ತಂಪಿಗಾಗಿ ಚಂದ್ರನನ್ನು ಜಟಾಭರಣವಾಗಿ ಧರಿಸಿದವನಲ್ಲವೇ ಶಶಿಭೂಷಣ, ಈ ನನ್ನ ಹುಡುಗ ಶಶಿಭೂಷಣಚಕ್ರವರ್ತಿಯು ಅಧ್ಯಾತ್ಮಜಗತ್ತಿನ ಚಕ್ರವರ್ತಿಯಾಗಲು ಯೋಗ್ಯನಾಗಿದ್ದಾನೆ" ಎಂದು ಆಗಲೇ ಮನಸ್ಸಿನಲ್ಲಿ ಮಂಡಿಗೆಮೆದ್ದರು.

ಸಂಭಾಷಣೆಯ ನಡುವೆ ಪರಮಹಂಸರು "ಶಶಿಭೂಷಣ, ನಿನಗೆ ದೇವರ ಸಾಕಾರ ಆರಾಧನೆ ಇಷ್ಟವೋ ಅಥವಾ ನಿರಾಕಾರ ಆರಾಧನೆ ಇಷ್ಟವೋ" ಎಂದು ಕೇಳಿದರು. ಆ ಹೊತ್ತಿಗಾಗಲೇ ಬೇಕಾದುದು, ಬೇಡವಾದುದು ಮುಂತಾದ ಎಲ್ಲವನ್ನೂ ತಲೆಯಲ್ಲಿ ತುಂಬಿಕೊಂಡು ತೊಳಲುತ್ತಿದ್ದ ರಾಮಕೃಷ್ಣಾನಂದರು "ದೇವರು ಇದ್ದಾನೋ ಇಲ್ಲವೋ ಎಂಬ ತಾಕಲಾಟದಲ್ಲಿ ನಾನಿದ್ದೇನೆ, ಹೀಗಿರುವಾಗ ನಿಮ್ಮ ಪ್ರಶ್ನೆಗೆ ಏನು ಉತ್ತರ ಕೊಡಬೇಕೋ ತಿಳಿಯದು" ಎಂದರು. ಅದೊಂದು ಮನದಾಳದ ಪ್ರಾಮಾಣಿಕ ಉತ್ತರವಾಗಿದ್ದುದರಿಂದ ಪರಮಹಂಸರು ಬೇಸರಿಸಿಕೊಳ್ಳಲಿಲ್ಲ. ಯಾರನ್ನು, ಹೇಗೆ, ಯಾವಾಗ ಸರಿದಾರಿಗೆ ತರಬೇಕೆಂಬುದನ್ನು ಆ ಸದ್ಗುರುನಾಥನು ಅರಿಯದವನೇ! ಒಡನೆಯೇ ಅಕ್ಕರೆಯಿಂದ "ನಿನ್ನ ಸಂದೇಹ ಸದ್ಯದಲ್ಲಿಯೇ ದೂರವಾಗುತ್ತದೆ. ಅಲ್ಲಿಯವರೆಗೆ ನೀನು, 'ದೇವರೇ, ನೀನು ಇರುವೆಯಾದರೆ ನನ್ನ ಬಿನ್ನಪವನಾಲಿಸು' ಎಂದು ಪ್ರಾರ್ಥನೆ ಮಾಡಪ್ಪಾ" ಎಂದು ತಿಳಿಯಹೇಳಿದರು. ಆ ಮಾತು ಯುವಹೃದಯವನ್ನು ಮುಟ್ಟಿತು, "ಹಾಗೆಯೇ ಆಗಲಿ ಮಹಾರಾಜ್" ಎಂದು ರಾಮಕೃಷ್ಣಾನಂದರು ಒಪ್ಪಿದರು. ಮೊದಲ ಭೇಟಿಯಲ್ಲಿಯೇ ಚಿಗುರೊಡೆದ ಆ ಆಧ್ಯಾತ್ಮಿಕ ಪ್ರೇಮ ಮುಂದೆ ಹೆಮ್ಮರವಾಗಿ ಸತ್ಫಲಗಳನ್ನು ನೀಡಿತು.

ರಾಮಕೃಷ್ಣಾನಂದರು ಪರಮಹಂಸರ ಸನ್ನಿಧಾನಕ್ಕೆ ಬರುವಾಗಲೆಲ್ಲ ಉತ್ತರಕಾಣದ ಗೋಜುಗೊಂದಲಗಳನ್ನು ಹೊತ್ತುಕೊಂಡೇ ಇರುತ್ತಿದ್ದರು. ಅವೆಲ್ಲವೂ ಪರಮಹಂಸರ ದಿವ್ಯಚಿತ್ತದಲ್ಲಿ ಪ್ರತಿಫಲಿಸುತ್ತಿದ್ದವು. ರಾಮಕೃಷ್ಣಾನಂದರು ಪ್ರಶ್ನಿಸದೆ ಕುಳಿತಿದ್ದರೂ ಆ ಹೊತ್ತಿನಲ್ಲಿ ಭಕ್ತರೊಡನೆ ಪರಮಹಂಸರಾಡುತ್ತಿದ್ದ ಮಾತುಕತೆಗಳಿಂದಲೇ ಅವೆಲ್ಲವೂ ನಿವಾರಣೆಯಾಗಿಬಿಡುತ್ತಿದ್ದವು. "ಆಹಾ, ನನ್ನ ಮನದ ಸಂಶಯವು ಈ ಮಹಾತ್ಮರ ವಾಣಿಯಿಂದ ಹರಿಯಿತು" ಎಂದು ರಾಮಕೃಷ್ಣಾನಂದರು ಸಂಭ್ರಮಭರಿತರಾಗುತ್ತಿದ್ದರು.

ಒಂದುದಿನ ಹೊರಗೆ ಏನನ್ನೋ ಹುಡುಕುವವರಂತೆ ಅಡ್ಡಾಡುತ್ತಿದ್ದ ರಾಮಕೃಷ್ಣಾನಂದರನ್ನು ಕಂಡ ಪರಮಹಂಸರು "ಶಶಿಭೂಷಣಾ, ನೀನು ಹುಡುಕುತ್ತಿರುವುದು ಇಲ್ಲೇ ಇದೆ ಬಾರಪ್ಪಾ, ಇಲ್ಲೇ ಇಲ್ಲೇ" ಎಂದು ಕೂಗಿ ಕರೆದರು. ಆಗ ಅತ್ತ ಕಡೆಗೆ ದೃಷ್ಟಿಹಾಯಿಸಿದ ರಾಮಕೃಷ್ಣಾನಂದರು, ಅಲ್ಲೊಂದು ಕಣ್ಣು ಕೋರೈಸುವ ಭವ್ಯಮೂರ್ತಿಯನ್ನು ಕಂಡು ಆ ತನ್ನ ಸದ್ಗುರುವಿಗೆ ಶರಣಾದರು.

**ಸಮಾನಮನಸ್ಕರ ಸಮ್ಮಿಳನ :** ಆ ಘಟನೆಯು ರಾಮಕೃಷ್ಣಾನಂದರ ಬದುಕಿನ ದಿಕ್ಕನ್ನೇ ಬದಲಿಸಿಬಿಟ್ಟಿತು. ಪರಮಹಂಸರೇ ನನಗೆ ಪರಮಗತಿ, ನಾನು ಭಕ್ತಿಪಥದಲ್ಲಿ ಸಾಗಬೇಕು, ಮುಕ್ತಿಪಥದಲ್ಲಿ ಸಾಗಬೇಕು ಎಂದು ನಿರ್ಧರಿಸಿ ತಮ್ಮ ಬಿ.ಎ. ಪದವಿ ವ್ಯಾಸಂಗಕ್ಕೆ ಮಂಗಳ ಹಾಡಿಬಿಟ್ಟರು. ತನ್ನ ಕೈಗೆ ಸಿಕ್ಕಿದ ಚಿನ್ನದಿಂದ ಕಾರ್ಯಕುಶಲನಾದ ಚಿನಿವಾರನೊಬ್ಬನು, ಅಂದವಾದ ಆಭರಣಗಳನ್ನು ಸಿದ್ಧಪಡಿಸುವಂತೆ, ಪರಮಹಂಸರು ರಾಮಕೃಷ್ಣಾನಂದರನ್ನು ದಿವ್ಯಮಂಗಳವಿಗ್ರಹವಾಗಿ ಕಡೆದು ನಿಲ್ಲಿಸಿದರು.

ಒಮ್ಮೆ ಪರಮಹಂಸರು ವಿವೇಕಾನಂದರನ್ನು ನೆನಪಿಸಿಕೊಳ್ಳುತ್ತಾ "ಆ ನರೇಂದ್ರನಿದ್ದಾನಲ್ಲ, ಅವನು ಜಗತ್ತನ್ನೆಲ್ಲ ಬ್ರಹ್ಮಮಯವಾಗಿ ಕಾಣಬಲ್ಲವನಾಗಿದ್ದಾನೆ; ಅದೇನು ಶಕ್ತಿ, ಅದೇನು ಅದ್ಭುತ!" ಎಂದು ಮನಮೀರಿ ಕೊಂಡಾಡಿದರು. ಅಷ್ಟಾಗುತ್ತಿದ್ದಂತೆಯೇ ರಾಮಕೃಷ್ಣಾನಂದರು ತಾವೇ ವಿವೇಕಾನಂದರನ್ನು ಕಂಡು, ಸ್ನೇಹಸಂಭಾಷಣೆ ನಡೆಸಿ, ಅವರನ್ನು ಆತ್ಮೀಯರನ್ನಾಗಿ ಮಾಡಿಕೊಂಡುಬಿಟ್ಟರು, ಅವರುಗಳು ಸಮಾನಮನಸ್ಕರು ಮಾತ್ರವಲ್ಲದೆ ಸಮಾನವಯಸ್ಕರೂ ಆಗಿದ್ದುದು ಆ ಸ್ನೇಹವನ್ನು ಗಟ್ಟಿಗೊಳಿಸಿತು.

**ಕೊಂದುಬಿಟ್ಟೇನು ಜೋಕೆ:** ೧೮೮೬ರಲ್ಲಿ ಪರಮಹಂಸರು ಅನಾರೋಗ್ಯದಿಂದ ಮಲಗಿದ ಬಳಿಕ, ರಾಮಕೃಷ್ಣಾನಂದರು ಅವರ ಸೇವೆಶುಶ್ರೂಷೆಗಳನ್ನು ಅತ್ಯಂತ ಎಚ್ಚರದಿಂದ ಮಾಡಿದರು. ಈ ನಡುವೆ ಅವರ ತಂದೆ ಈಶ್ವರಚಂದ್ರರು ಕಾಶೀಪುರತೋಟಕ್ಕೆ ಬಂದು "ನೀನು ಮನೆಗೆ ಹಿರಿಯನಲ್ಲವೆ, ಎಲ್ಲರನ್ನೂ ನೋಡಿಕೊಳ್ಳುತ್ತ ಗೃಹಸ್ಥನಾಗಿ ನೆಲೆಯಾಗಬೇಡವೇ, ಮನೆಗೆ ಹೋಗೋಣ ಬಾರಪ್ಪಾ" ಎಂದು ಒತ್ತಾಯಿಸಿದರು. ಆಗ ರಾಮಕೃಷ್ಣಾನಂದರು "ನಾನು ಮತ್ತೆ ಮನೆಗೂ ಮರಳುವುದಿಲ್ಲ, ಈ ಜಗತ್ತಿಗೂ ಮರಳುವುದಿಲ್ಲ. ಏಕೆಂದರೆ ಅವೆಲ್ಲವೂ ನನಗೆ ಹುಲಿಕರಡಿಸಿಂಹಶಾರ್ದೂಲಗಳಿಂದ ತುಂಬಿ ಭಯಂಕರವಾಗಿ ಕಾಣುತ್ತಿವೆ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು.

ಆಮೇಲೆ ಈಶ್ವರಚಂದ್ರರು ಮಂತ್ರತಂತ್ರಗಳಲ್ಲಿ ನುರಿತವರಾಗಿದ್ದುದರಿಂದ ಮಗನು ಮನೆಗೆ ಮರಳಲೆಂದು ವಶೀಕರಣಮಂತ್ರವೊಂದನ್ನು ಪ್ರಯೋಗಿಸಿದರು. ಅದೇನೂ ನಾಟಲಿಲ್ಲ. ಕೊನೆಯ ಪ್ರಯತ್ನವಾಗಿಯೋ ಏನೋ ಒಮ್ಮೆ ಈಶ್ವರಚಂದ್ರರು "ಆ ಪರಮಹಂಸರು ಅದಾವ ಮಹಾಗುರು ಎಂದು ನೀವೆಲ್ಲ ಮುಗಿಬೀಳುತ್ತಿದ್ದೀರೋ ಕಾಣೆ" ಎಂದು ಕಡೆಗಂಡು ನುಡಿದರು. ಅದನ್ನು ಕೇಳುತ್ತಲೇ ರಾಮಕೃಷ್ಣಾನಂದರಿಗೆ ಅಂಗಾಲಕಿಚ್ಚು ನೆತ್ತಿಗೇರಿತು. "ಆ ಸದ್ಗುರುವಿನ ಮಹಿಮೆ ನಿಮಗೇನು ಗೊತ್ತು; ಹಾಗೆಲ್ಲ ಹಗುರವಾಗಿ ಮಾತನಾಡಿದರೆ ಕೊಂದುಬಿಟ್ಟೇನು. ಜೋಕೆ" ಎಂದು ಗರ್ಜಿಸಿದರು. ಆಗ ಈಶ್ವರಚಂದ್ರರು "ಆಗಲಪ್ಪಾ, ಗುರುಭಕ್ತಿಯೆಂದರೆ ಹೀಗಿರಬೇಕು, ಅದೇ ಸ್ಥಿರವಾಗಲಿ. ನಿನಗೆ ಶುಭವಾಗಲಿ" ಎಂದು ಹರಸಿ ಹೊರಟುಹೋದರು.

೧೮೮೬ರಲ್ಲಿ ಶ್ರೀರಾಮಕೃಷ್ಣರ ದೇಹಾವಸಾನವಾದಾಗ ರಾಮಕೃಷ್ಣಾನಂದರು ಮೂರ್ಛೆಹೋಗಿ ಒರಗುವಷ್ಟು ದುಃಖಿತರಾದರು. ಅಸ್ಥಿಸಂಚಯನಕಾರ್ಯವು ಅವರಿಂದಲೇ ನೆರವೇರಿತು. ಪರಮಹಂಸರು ದೇಹದಲ್ಲಿರುವಾಗಲೇ ಅವರಿಂದ ಕಾವಿಯನ್ನೂ ಮಾಲೆಯನ್ನೂ ಪಡೆದುಕೊಂಡಿದ್ದ ರಾಮಕೃಷ್ಣಾನಂದರು, ತರುವಾಯ ವಿವೇಕಾನಂದರ ದಿಗ್ದರ್ಶನದಲ್ಲಿ ಶಾಸ್ತ್ರೀಯವಾಗಿ ಸಂನ್ಯಾಸಿಗಳಾಗಿ, ಅವರಿಂದಲೇ ಸಂನ್ಯಾಸನಾಮವನ್ನು ಪಡೆದುಕೊಂಡರು.

**ಸಮುದ್ರದ ಮರಳನ್ನೇ ತಿನ್ನಿಸುತ್ತೇನೆ:** ೧೮೯೭ರಲ್ಲಿ ರಾಮಕೃಷ್ಣಾನಂದರು ಸದ್ಗುರುವಿನ ತತ್ತ್ವಪ್ರಚಾರಕ್ಕಾಗಿ ದಕ್ಷಿಣ ಭಾರತವನ್ನು ಪ್ರವೇಶಿಸಿದರು. ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿ ಮಠವೊಂದನ್ನು ಸ್ಥಾಪಿಸಿದರು. ಆರಂಭದ ವರ್ಷಗಳಲ್ಲಿ ಅನ್ನಾಹಾರಗಳಿಗೂ ಕಷ್ಟವಾಯಿತು. ಒಮ್ಮೊಮ್ಮೆ ಸದ್ಗುರುವಿನ ನೈವೇದ್ಯಕ್ಕೂ ದ್ರವ್ಯಗಳಿರುತ್ತಿರಲಿಲ್ಲ. ಒಂದು ದಿನವಂತೂ ಬಹಳ ರೋಸಿಹೋಗಿ ರಾಮಕೃಷ್ಣಾನಂದರು "ನೀನು ಹೀಗೆ ನನ್ನನ್ನು ಇಲ್ಲಿ ತಂದುಹಾಕಿ ತಮಾಷೆ ನೋಡುತ್ತಿದ್ದೀಯಾ? ಸ್ವಲ್ಪತಾಳು, ಈದಿನ ನಿನಗೆ ಸಮುದ್ರದ ಮರಳನ್ನೇ ತಂದು ತಿನ್ನಿಸುತ್ತೇನೆ" ಎಂದು ಕೆರಳಿದರು. ಸದ್ಗುರುವೇ ಒದಗಿಸುತ್ತಾನೆ ಎಂಬ ಅಚಲ ವಿಶ್ವಾಸ ಅವರದು. ಸ್ವಲ್ಪಹೊತ್ತಿಗೇ ಯಾರೋ ಬಂದು ಸಾಕಷ್ಟು ಆಹಾರ ಪದಾರ್ಥಗಳನ್ನು ಸಮರ್ಪಿಸಿ ಹೋದರು. ಸದ್ಯ, ಸದ್ಗುರುವು ಮರಳು ಮುಕ್ಕುವುದು ತಪ್ಪಿತು.

ಹದಿನಾಲ್ಕುವರ್ಷಗಳ ಕಾಲ ರಾಮಕೃಷ್ಣಾನಂದರು ಚೆನ್ನೈಮಠದಲ್ಲಿದ್ದುಕೊಂಡು ಸದ್ಗುರುಸೇವೆಯನ್ನು ಅಭೂತ ಪೂರ್ವವಾಗಿ ಮಾಡಿದರು. ಶ್ರೀಮಾತೆಯವರು ದಕ್ಷಿಣದೇಶದ ಯಾತ್ರೆಯನ್ನು ಕೈಗೊಂಡಿದ್ದಾಗ ಚೆನ್ನೈಮಠದಲ್ಲಿ ಒಂದುತಿಂಗಳು ನೆಲೆಯಾಗಿದ್ದರು. "ರಾಮೇಶ್ವರನ ಅಷ್ಟೋತ್ತರಪೂಜೆಗೆ ನನಗೆ ಶಶಿ, ಚಿನ್ನದ ಬಿಲ್ವಪತ್ರೆಗಳನ್ನೇ ಮಾಡಿಸಿ ಕೊಟ್ಟ" ಎಂದು ಶ್ರೀಮಾತೆ ಅಭಿಮಾನದಿಂದ ಹೇಳುತ್ತಿದ್ದರು. ಕರ್ನಾಟಕವು ಕೂಡ ರಾಮಕೃಷ್ಣಾನಂದರ ಪಾದಸ್ಪರ್ಶ ದಿಂದ ಪುನೀತವಾಯಿತು. ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದ ಸ್ಥಾಪನೆಯಲ್ಲಿ ಅವರು ಪ್ರಮುಖಪಾತ್ರ ವಹಿಸಿದರು. ಅವರು ಮೈಸೂರಿಗೂ ಬಂದು ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದ್ದಾರೆ.

**ವ್ಯಕ್ತಿತ್ವದ ವರ್ಣಮಯತೆ:** ರಾಮಕೃಷ್ಣಾನಂದರು ಭಕ್ತಿಜ್ಞಾನವೈರಾಗ್ಯಗಳ ಸಾಕಾರಮೂರ್ತಿಯಾಗಿದ್ದರು. "ಶಶಿ, ನೀನು ಬಿ.ಎ. ಪದವಿ ಮುಗಿಸಿ ಆಮೇಲೆ ಗುರುಸೇವೆ ಮಾಡಿದರಾಗದೇ" ಎಂದು ಯಾರೋ ಹಿತೈಷಿಗಳು ಹೇಳಿದ್ದಕ್ಕೆ "ಅಲ್ಲಿಯವರೆಗೆ ಬದುಕಿರುತ್ತೇವೆಂಬ ನಿಶ್ಚಯವಾದರೂ ಏನಿದೆ" ಎಂದು ಯಾರಾದರೂ ತಲೆಬಾಗುವ ಉತ್ತರವನ್ನು ಕೊಟ್ಟಿದ್ದರು. ಬಾರಾನಗರಮಠದಲ್ಲಿದ್ದಾಗ ಕೆಲವು ಕ್ರೈಸ್ತಮತ ಪ್ರಚಾರಕರು ತಮ್ಮನ್ನು ಸೆಳೆಯಲೆಂದು "ಕ್ರಿಸ್ತನ ಮೂಲಕ ವಲ್ಲದೆ ನಿಮಗೆ ಮೋಕ್ಷವಿಲ್ಲ" ಎಂದು ಹೇಳಿದ್ದಕ್ಕೆ ರಾಮಕೃಷ್ಣಾನಂದರು ಬೈಬಲ್ಲನ್ನೇ ಮುಂದಿಟ್ಟುಕೊಂಡು, ಅವರ ವಾದದ ಪೊಳ್ಳುತನವನ್ನು ತೋರಿಸಿಕೊಟ್ಟರು. ಇನ್ನೊಮ್ಮೆ "ನೀವು ಕ್ರೈಸ್ತರಾದರೆ ನಿಮಗಾಗಿ ಆಂಗ್ಲಸುಂದರಿಯರನ್ನು ಜೋಡಿಸಿಟ್ಟಿದ್ದೇವೆ" ಎಂದು ಆಸೆ ತೋರಿಸಿದರು. ಕಾಮಿನಿಕಾಂಚನಗಳ ಮೇಲೆ ವಿಜಯಸಾಧಿಸಿ ಬಂದಿರುವವರಿಗೆ ಹೆಣ್ಣುಗಳನ್ನು ಹೊಂದಿಸಿಕೊಡುವ ಧೀರರು ಯಾರಿದ್ದಾರೆ! ಆಗ ರಾಮಕೃಷ್ಣಾನಂದರು ಕೋಪದಿಂದ ಅವರ ಜನ್ಮಜಾಲಾಡುತ್ತ "ಇನ್ನೊಮ್ಮೆ ಇತ್ತಕಡೆ ತಲೆಹಾಕೀರಿ, ಜೋಕೆ" ಎಂದು ಎಚ್ಚರಿಕೆಕೊಟ್ಟು ಓಡಿಸಿದರು.

ರಾಮಕೃಷ್ಣಾನಂದರು ಅಸಹಾಯಶೂರರಾಗಿದ್ದರು. ಯಾರ ಸಹಾಯವನ್ನೂ ಬೇಡುತ್ತಿರಲಿಲ್ಲ. ಅಮೆರಿಕನ್ ಸಂನ್ಯಾಸಿನಿ ದೇವಮಾತಾ ಚೆನ್ನೈನಲ್ಲಿ ಎರಡು ವರ್ಷ ನೆಲೆಸಿದ್ದಳು. ಸ್ವದೇಶಕ್ಕೆ ಮರಳುವಾಗ "ಮಹಾರಾಜ್, ನಾನು ಇನ್ನಷ್ಟು ದಿನ ಇಲ್ಲಿಯೇ ಇದ್ದಿದ್ದರೆ ನಿಮಗೆ ಸಹಾಯಮಾಡಬಹುದಾಗಿತ್ತು" ಎಂದಳು. ಅವಳ ಧ್ವನಿಯಲ್ಲಿ ಕೊಂಚ ಅಹಂಭಾವವಿತ್ತೋ ಏನೋ! ಆಗ ರಾಮಕೃಷ್ಣಾನಂದರು, "ಚಿಂತೆಯಿಲ್ಲ ತಂಗಿ, ಯಾರಾದರೂ ನನಗೆ ಸಹಾಯಮಾಡಬೇಕೆಂದು ನಾನು ಆಸೆಪಡುವುದಿಲ್ಲ. ಏನಾದರೂ ಸಹಾಯಬೇಕಾದರೆ ಶ್ರೀರಾಮಕೃಷ್ಣರನ್ನೇ ಬೇಡುತ್ತೇನೆ" ಎಂದು ಉತ್ತರಿಸಿದರು.

ರಾಮಕೃಷ್ಣಾನಂದರು ಬಂಗಾಳಿ, ಸಂಸ್ಕೃತ, ಇಂಗ್ಲಿಷ್, ತಮಿಳು, ಪರ್ಷಿಯನ್‌ಗಳ ಪಂಚಭಾಷಾ ಪ್ರವೀಣರಾಗಿದ್ದರು. ವೇದೋಪನಿಷತ್ತುಗಳೇ ಆದಿಯಾಗಿ ನಮ್ಮ ಸನಾತನ ಗ್ರಂಥರಾಶಿಯನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದರು. ಪರ್ಷಿಯನ್ ಭಾಷೆಯಲ್ಲಿರುವ ಸೂಫಿಸಾಹಿತ್ಯವನ್ನೆಲ್ಲ ಸಂಗ್ರಹಿಸಿ ಅದರ ಅಧ್ಯಯನದಲ್ಲಿ ಮುಳುಗಿಬಿಡುತ್ತಿದ್ದರು. ಆ